ಖ್ಯಾತ ನಟ ಶಶಿಕಪೂರ್ ಜೊತೆ



# ಕನ್ನಡ ಚಿತ್ರರಂಗದ ನವೋದಯ ಪುರುಷ

**ಕೆ. ಪುಟ್ಟಸ್ವಾಮಿ**

**ಮೂ**ಲ ಭಕ್ತವತ್ಸಲ ಅವರು ತಮ್ಮ 84 ವರ್ಷಗಳ ವರ್ಣಮಯ ಬದುಕಿನಲ್ಲಿ ನಿರ್ವಹಿಸಿದ ಪಾತ್ರಗಳು ಹಲವು. ತಂತ್ರಜ್ಞರು, ಆಡಳಿತ ನಿರ್ವಹಣಾ ತಜ್ಞರು, ಬರಹಗಾರ, ಚಲನಚಿತ್ರ ವಿಮರ್ಶಕ, ಪ್ರದರ್ಶಕ, ನಿರ್ಮಾಪಕ, ನಿರ್ದೇಶಕ ಮತ್ತು ಸಾಮಾಜಿಕ ಕಾರ್ಯಕರ್ತ. ಅವರ ಆಸಕ್ತ ಕ್ಷೇತ್ರ ಸಂಗೀತದಿಂದ ಹಿಡಿದು ಪರ್ವತಾರೋಹಣದವರೆಗೆ ವ್ಯಾಪಿಸಿತ್ತು. ರುಚಿಶುದ್ಧ ಬದುಕನ್ನು ಬಾಳಿದ ಅವರು ಕನ್ನಡ ಚಲನಚಿತ್ರೋದ್ಯಮಕ್ಕೆ ಭದ್ರವಾದ ಅಡಿಪಾಯ ಹಾಕಿದ ದಾರ್ಶನಿಕರು.

ಪ್ರಸಿದ್ಧ ಅಬ್ಕಾರಿ ಗುತ್ತಿಗೆದಾರರೂ, ಬೆಂಗಳೂರು ಸೇರಿದಂತೆ, ರಾಜ್ಯದ ಹಲವು ನಗರಗಳಲ್ಲಿ ಚಲನಚಿತ್ರ ಮಂದಿರಗಳ ಒಡೆಯರೂ ಆಗಿದ್ದ ಉದ್ಯಮಿ ಮೂಲ ರಂಗಪ್ಪನವರ ಪುತ್ರ, ಎಂ. ಭಕ್ತವತ್ಸಲ. ಹುಟ್ಟಿದ್ದು ಶಿವಮೊಗ್ಗದಲ್ಲಿ. ಅಲ್ಲಿನ ಪರಿಸರದ ಗಾಢ ನೆನಪುಗಳನ್ನು ಅವರು ತಮ್ಮ 'ಗೋಪಿ ಸರ್ಕಲ್' ಕೃತಿಯಲ್ಲಿ ಕತೆಗಳಾಗಿ ನಿರೂಪಿಸಿದ್ದಾರೆ. ಎಂಜಿನಿಯರಿಂಗ್ ಪದವಿ ಪಡೆದ, ಬ್ರಿಟನ್‌ನಲ್ಲಿ ಮ್ಯಾನೇಜ್‌ಮೆಂಟ್ ಪದವಿ ಗಳಿಸಿದ ಅವರು 1958ರಲ್ಲಿ ಎಚ್.ಎಂ.ಟಿ. ಸಂಸ್ಥೆಯಲ್ಲಿ ಇಂಡಸ್ಟ್ರಿಯಲ್ ರಿಲೇಷನ್ಸ್ ಅಧಿಕಾರಿಯಾಗಿ, ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿದರು.

ಸಂಸ್ಥೆಯ ಜನರಲ್ ಮ್ಯಾನೇಜರ್ ಹುದ್ದೆಗೇರಲು ಸನಿಹದಲ್ಲಿರುವಾಗಲೇ, ಚಲನಚಿತ್ರರಂಗದ ಆಸಕ್ತಿಯಿಂದ ಉದ್ಯೋಗ ತೊರೆದರು. ಎಚ್.ಎಂ.ಟಿ. ಸಂಸ್ಥೆಗೆ ಸೇರುವ ಮೊದಲು ದಿ ಪ್ರಿಂಟರ್ಸ್ ಮೈಸೂರ್ ಲಿಮಿಟೆಡ್‌ನ ಮೊದಲ ಕಂಪನಿ ಸೆಕ್ರೆಟರಿಯಾಗಿ ಹಾಗೂ ಸಂಸ್ಥೆಯ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳ ಪ್ರಕಾಶಕರಾಗಿ, ನಂತರ ಆಡಳಿತ ಮಂಡಳಿಯ ನಿರ್ದೇಶಕರಾಗಿಯೂ ಅವರು ಕರ್ತವ್ಯ ನಿರ್ವಹಿಸಿದ್ದರು.

ತಮ್ಮ ಕುಟುಂಬವು ಚಲನಚಿತ್ರ ಹಂಚಿಕೆ, ಪ್ರದರ್ಶನ ಮತ್ತು ನಿರ್ಮಾಣದಲ್ಲಿ ತೊಡಗಿದ್ದರಿಂದ ಚಿತ್ರೋದ್ಯಮದ ಬಗ್ಗೆ ಆಸಕ್ತಿ ತಳೆದದ್ದು ಸಹಜವಾಗಿತ್ತು. ಜಗತ್ತಿನ ಶ್ರೇಷ್ಠ ಚಿತ್ರಗಳು, ಚಿತ್ರ ಪಂಥಗಳ ಬಗ್ಗೆ ಅಧ್ಯಯನದ ಹಿನ್ನೆಲೆಯೂ ಇತ್ತು. ಬೆಂಗಳೂರು ಕ್ಲಬ್‌ನಲ್ಲಿ ಆಸಕ್ತರಿಗಾಗಿ ಚಲನಚಿತ್ರಗಳನ್ನು ಪ್ರದರ್ಶಿಸುವ ಮತ್ತು ಚರ್ಚಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಅನುಭವವಿತ್ತು.

1971ರ ಮೇ ತಿಂಗಳಲ್ಲಿ ಅಂದಿನ ಮೈಸೂರು ಚಲನಚಿತ್ರ ವಾಣಿಜ್ಯ ಮಂಡಳಿಗೆ ಭಕ್ತವತ್ಸಲ ಮೊದಲ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾದರು. ಅದಕ್ಕೂ ಮುನ್ನ ಮಂಡಳಿಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಅನುಭವವಿತ್ತು. ಅವರ ಅಧ್ಯಕ್ಷತೆಯಲ್ಲಿ ಮಂಡಳಿ ಮೈಕೊಡವಿ ಎದ್ದು ನಿಂತಿತು.

ವಾಣಿಜ್ಯ ಮಂಡಳಿಯಲ್ಲಿ ಎಲ್ಲ ರಂಗಗಳಿಗೂ ಪ್ರಾತಿನಿಧ್ಯ ಕಲ್ಪಿಸಲು ಹಾಗೂ ಪ್ರಜಾಪ್ರಭುತ್ವವಾಗಿ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಮ್ಯಾನೇಜ್‌ಮೆಂಟ್ ತಜ್ಞತೆಯನ್ನು ಬಳಸಿಕೊಂಡರು. ಶಿಸ್ತು, ಪ್ರಾಮಾಣಿಕತೆ ಮತ್ತು ವಿಷಯದಲ್ಲಿ ಸ್ಪಷ್ಟತೆಯಿದ್ದ ಭಕ್ತವತ್ಸಲ ಅವರ ನಿಲುವುಗಳಿಗೆ ಪೂರಕವಾದ ಸ್ಪಂದನೆ ಇಡೀ ಚಿತ್ರೋದ್ಯಮದಿಂದ ಸಿಕ್ಕಿತು. ಅಲ್ಲಿಂದಾಚೆಗೆ ಅವರು ಕರ್ನಾಟಕ ಚಲನಚಿತ್ರ ಮಂಡಳಿಗೆ ಒಂದು ಭದ್ರವಾದ ಬುನಾದಿಯನ್ನು ಹಾಕಿದರು.

ಭಕ್ತವತ್ಸಲ ಅವರು ಉದ್ಯಮದ ವಿವಿಧ ವಲಯಗಳ ನಡುವೆ ಮೂಡಿಸಿದ ಸಾಮರಸ್ಯ ಒಂದು ಪವಾಡದಂತೆ ಜರುಗಿತು. ಅವರು ವಾಣಿಜ್ಯ ಮಂಡಳಿಯ ಆಡಳಿತ ಸ್ವರೂಪವನ್ನು ಸಂಪೂರ್ಣವಾಗಿ ಮಾರ್ಪಾಡುಗೊಳಿಸಿದರು. ಸಂಸ್ಥೆಗೆ ಹೊಸ ಅಂಗರಚನೆಯೊಂದು ರೂಪುಗೊಂಡಿತು. ಕಾರ್ಯಕಾರಿ ಸಮಿತಿಯಲ್ಲಿ ನಿರ್ಮಾಪಕರು, ಹಂಚಿಕೆದಾರರು ಮತ್ತು ಪ್ರದರ್ಶಕರ ವಲಯಕ್ಕೆ ಸಮಾನ ಪ್ರಾತಿನಿಧ್ಯ ಕಲ್ಪಿಸಲಾಯಿತು. ಜೊತೆಗೆ ತಮ್ಮ ವಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಆಯಾ ವಲಯಗಳಲ್ಲಿಯೇ ಪರಿಹರಿಸಿಕೊಳ್ಳಲು ನಿರ್ಮಾಪಕ, ಹಂಚಿಕೆ ಮತ್ತು ಪ್ರದರ್ಶಕರ ಪ್ರತ್ಯೇಕ ಸಮಿತಿಗಳು ಅಸ್ತಿತ್ವಕ್ಕೆ ಬಂದವು.

ಕನ್ನಡ ಚಿತ್ರೋದ್ಯಮದಲ್ಲಿ 1973ರ ವರ್ಷಾರಂಭದಿಂದ ಸ್ವಯಂ ನಿಯಂತ್ರಣ ಪದ್ಧತಿಯೊಂದನ್ನು ಜಾರಿಗೆ ತಂದದ್ದು ಮಂಡಳಿಯ ಮತ್ತೊಂದು ಸಾಧನೆ. ಈ ಪದ್ಧತಿಯ ಮೇರೆಗೆ ವಾಣಿಜ್ಯ ಮಂಡಳಿಯ ವಿವಿಧ ಕ್ಷೇತ್ರಗಳ